ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Saturday, the 25th June, 1977/Ashada 4, 1899 S.E.

The House met in the Assembly Chamber, Vidhana Soudha, at Nine of the Clock.

[MADAM SPEAKER (SMT. K. S NAGARATHNAMMA) in the Chair.]

STARRED QUESTIONS
(to which oral Answers were given)

National Highway in Tumkur Division

137. SRI T. TARE GOWDA (Kallambella).—Will the Minister for Public Works be pleased to state.—

(*a*) whether Government is aware that adequate funds are available for taking, widening and asphalting work in National Highway No. 4, Tumkur Division ;

(*b*) the length of National Highway No. 4 from Gubbi to Sira Taluk border near Vijayanakunte taken up and the number of labourers employed ;

(*c*) whether the estimate for straightening the National Highway No. 4 Road from 81 to 82 including the construction of a new bridge at Tavarekere at the double curve has been sanctioned ;

(*d*) if not, whether recommendation for sanction has been sent to the higher authorities of National Highway No. 4 and if so, when ; and the estimated amount thereon ?

SRI M. MALLIKARJUNA SWAMY (Minister for Public Work).—

(*a*) Yes.

(*b*) The road from Gubbi to Sira Taluk Border is not a National Highway.

(*c*) No.

(d) Estimate is under preparation.

ಶ್ರೀ ಟಿ. ತಾರೇಗೌಡ.—ವಿಜಯನಕುಂಟೆ ಬಳಿಯ ಗಡಿಯಿಂದ ರಾಷ್ಟ್ರೀಯ ಹೆದ್ದಾರಿ ಎಷ್ಟು ಮೈಲಿ ಎಂದು ನಾನು ಪ್ರಶ್ನೆ ಕೇಳಿದ್ದರೆ, ಗುಬ್ಬಿಯಿಂದ ಎಷ್ಟು ಎಂಬುದಾಗಿ ತಪ್ಪು ಪ್ರಿಂಟಾಗಿದೆ. ಆದ್ದರಿಂದ ನ್ಯಾಷನರ್ ಹೈವೆ ಕಿರಾ ತಾಲ್ಲೂಕಿನವರೆಗೆ 25 ಮೈಲಿಗಳಿರುವುದು ನಿಜವಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅದು ನನಗೆ ಗೊತ್ತಿಲ್ಲ ಇಷ್ಟು ಮಾತ್ರ ನನಗೆ ಗೊತ್ತಿದೆ. ಮಾನ್ಯ ಸದಸ್ಯರ ಪ್ರಶ್ನೆ ತಪ್ಪು ಪ್ರಿಂಟಾಗಿದೆ ಎಂದು ಹೇಳುವುದಾದರೆ ಬೇರೆ ಪ್ರಶ್ನೆಯನ್ನು ಕೇಳಲಿ. ಆದರೆ ಈಗ ಈ ರಾಷ್ಟ್ರೀಯ ಹೆದ್ದಾರಿಯ ಕೆಲಸ ಮಾಡಿಸುವುದಕ್ಕೆ ಸಾಕಷ್ಟು ಹಣ ಇದೆ.

ಶ್ರೀ ಟಿ. ತಾರೇಗೌಡ —ಈ ರಾಷ್ಟ್ರೀಯ ಹೆದ್ದಾರಿಯ ಉದ್ದ 25 ಮೈಲಿಗಳು. ಇಲ್ಲಿ 2 ಮೇಜರ್ ಬ್ರಿಡ್ಜ್‌ಗಳಿಗೆ ಅಂದಾಜು ಮಾಡಿತ್ತು. ಅದರಲ್ಲಿ ಒಂದು ಚಿಕ್ಕನಳ್ಳಿದು. ಇದರ ಎಸ್ಟಿಮೇಟ್ ತಯಾರಾಗಿ ಈಗಾಗಲೇ ಸುಮಾರು 2-3 ವರ್ಷಗಳಾಯಿತು. ಇನ್ನೂ ಅದು ಪೂರ್ತಿಯಾಗಿಲ್ಲ. ಹಿಂದೆ ಕೇಂದ್ರ ಮಂತ್ರಿಗಳಾದ ಶ್ರೀ ರಾಜಬಹದ್ದೂರ್ ರವರು ಹಾಗೂ ಸಂಬಂಧಪಟ್ಟ ಪಿ. ಡಬ್ಲ್ಯೂ. ಡಿ. ಮಿನಿಸ್ಟರ್ ತಾವರಕೆರೆಯ ಹತ್ತಿರ ಎರಡು ಅಡ್ಡ ಸೇತುವೆಗಳ ಅಲೈನ್‌ಮೆಂಟ್ ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆ ಈ ಕಾರ್ಯ ಮಾಡಿಸುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಆ ಎಸ್ಟಿಮೇಟ್ ಇನ್ನೂ ತಯಾರು ಮಾಡಿಲ್ಲವೆಂದು ನನಗೆ ಈಗ ವರ್ತಮಾನ ತಿಳಿದು ಬಂದಿರುವುದರಿಂದ ಈಗಲಾದರೂ ಆದನ್ನು ಜಾಗ್ರತೆಯಾಗಿ ಮಾಡಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಈಗ ಎರಡು ಸೇತುವೆಗಳ ಬಗ್ಗೆ ಪ್ರಶ್ನೆ ಕೇಳುತ್ತಿದ್ದಾರೆ. ಪ್ರಶ್ನೆಯಲ್ಲಿರುವುದು ಒಂದು ಸೇತುವೆ ವಿಷಯ ಮಾತ್ರ. ಇದರ ಎಸ್ಟಿಮೇಟ್ 9 ಲಕ್ಷದ 47 ಸಾವಿರ ರೂಪಾಯಿಗಳು. ಇತ್ತೀಚೆಗೆ ಆದನ್ನು ಈ ವರ್ಷದ ಸಂಬಂಧಪಟ್ಟ ಆದ್ಯತೆ ಪಟ್ಟಿಯಲ್ಲಿ ಸೇರಿಸಲಾಗಿದೆ. ಏಕೆಂದರೆ ಸೇತುವೆಗಳಿಗೆ ಸಂಬಂಧಪಟ್ಟ ಪಟ್ಟಿಯೊಂದನ್ನು ಈಗ ನಾವು ತಯಾರಿಸಿದ್ದೇವೆ. ಅದರಲ್ಲಿ ಇದೂ ಕೂಡ ಸೇರಿದೆ. ಅದನ್ನು ಮುಂದೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ. ತಾರೇಗೌಡ.—ತುರುವೇಕೆರೆ ಗ್ರಾಮದ ಬಳಿ ಈ ರಾಷ್ಟ್ರೀಯ ಹೆದ್ದಾರಿ ರಸ್ತೆಯನ್ನು ಸ್ಪೈ್ರಟನ್ ಮಾಡುವುದಕ್ಕೆ ಈಗಾಗಲೇ ಮಾರ್ಕ್ ಮಾಡಿದ್ದಾರೆ. ಇನ್ನೂ ೪ ಕೆಲಸ ಆಗಿಲ್ಲ. ಆದರ ಬಗ್ಗೆ ಅಲೈನ್‌ಮೆಂಟ್ ಮಾಡಿ ಕೂಡಲೇ ಈ ಕೆಲಸವನ್ನು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ಬೇರೆ ಪ್ರಶ್ನೆ. ಈಗಿನ ಪ್ರಶ್ನೆಗೆ ಏನು ಉತ್ತರ ಹೇಳಬೇಕೋ ಅಷ್ಟು ಮಾತ್ರ ಹೇಳಿದ್ದೇನೆ.

ಅಧ್ಯಕ್ಷರು.—ಪ್ರಶ್ನೆ 154 ಮತ್ತು 269 ಒಟ್ಟಿಗೆ ತೆಗೆದು ಕೊಳ್ಳೋಣ.

Family Planning Operations

154. SRI T. R. SHAMANNA (Fort).—Will the Minister for Health be pleased to state.—

(*a*) the number of Family Planning operations performed in the State :—

On (1) female and (2) male district-wise figures may be furnished ;

(*b*) the total cash incentives given to these persons ?

SRI H. M. CHANNABASAPPA (Minister for Health).—

(*a*) District-wise statement appended.

(*b*) Rs. 3,97,61,300.